# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. **760 / 2021**

ಸಿಡಬ್ಲ್ಯೂ- **1**
ಪಿಡಬ್ಲ್ಯೂ- **1**

ದಿನಾಂಕಃ **24.07.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ವಿಷ್ಣುವರ್ದನ್ |
| ತಂದೆಯ/ಗಂಡನ ಹೆಸರುಃ | - | ನಾರಾಯಾಣ |
| ವಯಸ್ಸುಃ | -? | **34** ವರ್ಷ |
| ಉದ್ಯೋಗಃ | - | ಸ್ಟಾಫ್ ನರ್ಸ್ ಸರಕಾರಿ ಜಿಲ್ಲಾ ಆಸ್ಪತ್ರೆ, ಯಾದಗಿರಿ. |
| ವಾಸಸ್ಥಳಃ | - | ಯಾದಗಿರಿ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಚಾಸಾ-**6** ನನ್ನ ಪತ್ತಿಯಾಗಬೇಕು. ನಾನು ಮತ್ತು **6** ರವರು ಕೂಡಿ ಯಾದಗಿರಿಯ ಸರಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮಗೆ ಎರಡು ಜನ ಮಕ್ಕಳು ಇರುತ್ತಾರೆ. ದಿನಾಂಕಃ **21.07.2021** ರಂದು ನನ್ನ ಹಾಗೂ ಚಾಸಾ-**6** ರವರ ದಿನಾಚರಿ ಅವಧಿಯು ರಾತ್ರಿ ಇತ್ತು ಆವಾಗ ನಾನು ಕರ್ತವ್ಯದಲ್ಲಿ ಇದ್ದೇವು. ನಮ್ಮ ಮಕ್ಕಳನ್ನು ಸಂಬಂಧಿಕರ ಮನೆಯಲ್ಲಿ ಬಿಟ್ಟು ನಾವು ರಾತ್ರಿ **8-30** ಗಂಟೆಗೆ ಕರ್ತವ್ಯ ನಿರ್ವಹಿಸಲು ಮನೆಗೆ ಬೀಗ ಹಾಕಿಕೊಂಡು ಹೋಗಿದ್ದೇವು. ನಂತರ ಮರುದಿವಾಸ ದಿನಾಂಕಃ **22.07.2021** ರಂದು ಬೆಳಗ್ಗೆ **5-30** ಗಂಟೆಗೆ ಮನೆಗೆ ಬಂದಾಗ ಮನೆಯ ಬೀಗ ಮುರಿದ್ದು ಕಳ್ಳತನ ಆಗಿತ್ತು. ಚಾಸಾ-**6** ರವರು ಮನೆಯ ಒಳಗಡೆ ಹೋಗಿ ಪರಿಶೀಲಿಸಿದ್ದಾಗ ಅಲಮರಿದಲ್ಲಿ ಇದ್ದ **20** ಗ್ರಾಂ ತೂಕದ ಒಂದು ಬಂಗಾರದ ಚೈನ್, **10** ಗ್ರಾಂ ಒಂದು ಬಂಗಾರದ ಚೈನ್, ನಗದು ಹಣ **25** ಸಾವಿರ ರೂಪಾಯಿ ಇವುಗಳೇಲ್ಲವು ಕಳ್ಳತನ ಆಗಿದ್ದವು. ಇವುಗಳನ್ನು ಹೊರತುಪಡಿಸಿ ಬೇರೆ ಏನು ಕಳವು ಆಗಿರುವುದಿಲ್ಲ. ನಂತರ ನಾನು ಚಾಸಾ-**7** ಮತ್ತು **8** ರವರಿಗೆ ಕಳ್ಳತನ ಆದ ವಿಷಯವನ್ನು ತಿಳಿಸಿದ್ದೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ್ದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **1** ಎಂದು ಗುರುತಿಸಲಾಯಿತು.

ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ **1**(ಎ) ಎಂದು ಗುರುತಿಸಲಾಯಿತು. ದೂರನ್ನು ನೀಡಿದ ನಂತರ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆದಿದ್ದರು ನನ್ನನ್ನು ವಿಚಾರಣೆ ಮಾಡಿದ್ದರು. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ಆಭರಣಗಳನ್ನು ಬಿಡಿಸುಕೊಳ್ಳುವ ಕಾಲಕ್ಕೆ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಬರೆದುಕೊಟ್ಟಿರುವುದನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ **2** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ **2**(ಎ) ಎಂದು ಗುರುತಿಸಲಾಯಿತು. ನಮ್ಮ ಮನೆಯನ್ನು ಯಾರು ಕಳ್ಳತನ ಮಾಡಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಠಾಣೆಯಿಂದ ಬಿಡಿಸಿಕೊಂಡ ಆಭರಣಗಳಾದ **20** ಗ್ರಾಂ ಬಂಗಾರದ ಚೈನ್, **10** ಗ್ರಾಂ ಬಂಗಾರದ ಚೈನ್, ನಗದು ಹಣ **15** ಸಾವಿರ ರೂಪಾಯಿ ಹಾಗೂ ಒಂದು ಸಾಮ್ ಸಾಂಗ್ ಕಂಪನಿಯ ಮೊಬೈಲ್ ನ್ನು ನಾನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಗುರುತಿಸಲು ಆರೋಪಿತರ ಪರ ವಕೀಲರು ತಕರಾರು ಮಾಡಿರುವುದಿಲ್ಲ. ಸಾಕ್ಷಿಯು ಛಾಯಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **5** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

ಪಾಟೀ ಸವಾಲುಃ ಸ.ಸ.ಅ ರವರಿಂದಃ

ದಿನಾಂಕಃ **22.07.2021** ರಂದು ಮದ್ಯಾಹ್ನ **1** ಗಂಟೆಯಿಂದ **2** ಗಂಟೆಯ ವರೇಗೆ ಪೊಲೀಸರು ಚಿರಂಜೀವಿ ನಗರದ ನಮ್ಮ ಮನೆಗೆ ಪಂಚನಾಮೆಗೆ ಬಂದಿದ್ದರು ಎಂದರೆ ಸರಿ. ಆ ಕಾಲಕ್ಕೆ ನಾನು ಕಳ್ಳತನವಾದ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದು ಅವರು ಚಾಸಾ-**2** ಮತ್ತು **3** ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **3** ಎಂದು ಗುರುತಿಸಲಾಯಿತು. ಈ ಪ್ರಕರಣದ ದೂರನ್ನು ನೀಡಿದ ನಂತರ ನಾವು ಮನೆಗೆ ಹೋಗಿ ಪರಿಶೀಲಿಸಿದ್ದಾಗ ಮನೆಯಲ್ಲಿ ಇದ್ದ ಒಂದು ಸಾಮಸಾಂಗ್ ಎಂ **-21** ಮೊಬೈಲ್ ಫೋನ್ ಕಳ್ಳತನ ಆಗಿತ್ತು ನಮ್ಮ ಗಮನಕ್ಕೆ ಬಂದಿತ್ತು. ಸದರಿ ಮಾಬೈಲ್ ಗಳ ಐ.ಎಂ.ಇ.ಐ ನಂಬರಃ **354984112115859,**

**354985112115856** ಇರುತ್ತದೆ ಎಂದು ನಾನು ದಿನಾಂಕಃ **22.07.2021** ರಂದು ಪೂಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

ದಿನಾಂಕಃ **03.08.2021** ರಂದು ಪೊಲೀಸರು ನನ್ನನ್ನು, ಚಾಸಾ-**6** ರಿಂದ **8** ರವರನ್ನು ಠಾಣೆಗೆ ಕರೆಯಿಸಿ ತಮ್ಮ ಅಭಿರಕ್ಷೆಯಲ್ಲಿ ಇದ್ದ ಇಬ್ಬರ ವ್ಯಕ್ತಿಗಳನ್ನು ತೋರಿಸಿ ಇವರೇ ನಿಮ್ಮ ಮನೆಯನ್ನು ಕಳ್ಳತನ ಮಾಡಿರುತ್ತಾರೆ ಎಂದು ತೋರಿಸಿ ಅವರಿಂದ ಜಪ್ತಿಪಡಿಸಿಕೊಂಡ ನಮ್ಮ ಮನೆಯಲ್ಲಿ ಕಳ್ಳತನವಾದ ಬಂಗಾರ ಆಭರಣಗಳನ್ನು ಮತ್ತು ಹಣವನ್ನು ತೋರಿಸಿ ಅವುಗಳನ್ನು ಗುರುತಿಸಲು ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾವು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳೆಲ್ಲವು ನಮ್ಮ ಮನೆಯಲ್ಲಿ ಕಳ್ಳತನ ಆದ ಆಭರಣಗಳು ಆಗಿದ್ದವು ಎಂದು ನಾವು ಗುರುತು ಹಿಡಿದಿದ್ದೇವು ಎಂದರೆ ಸರಿ. ಕಳ್ಳತನ ಆದ ವ್ಯಕ್ತಿಗಳನ್ನು ನಮ್ಮಗೆ ತೋರಿಸಿರುವುದಿಲ್ಲ. ನಾವು ಕಳ್ಳತನ ಮಾಡಿದ ವ್ಯಕ್ತಿಗಳ ಹೆಸರು ಮತ್ತು ವಿಳಾಸ ಕೇಳಲಾಗಿ ಅವರು ತಮ್ಮ ಹೆಸರು ಬನ್ನಪ್ಪ ತಂದೆ ನರಸಿಂಗಪ್ಪ ಕಂಬಾರ, ಬನ್ನಪ್ಪ ತಂದೆ ಮಹಾಂಕಾಳಪ್ಪ ತಿಪ್ಪಕನೂರು ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ನಾವು ಅವರನ್ನು ಕುರಿತು ಮನೆಯನ್ನು ಕಳ್ಳತನ ಹೇಗೆ ಮಾಡಿದ್ದೀರಿ ಎಂದು ಕೇಳಿದ್ದಾಗ ಅವರು ದಿನಾಂಕಃ **21.07.2021** ರಂದು ಸಾಯಂಕಾಲ **7-30** ಗಂಟೆಗೆ ನಮ್ಮೂರಿನಿಂದ ಯಾದಗಿರಿಗೆ ಬಂದು ಸುತ್ತಮುತ್ತಲು ತೀರಿಗಾಡಿ ಚಿರಂಜೀವಿ ನಗರ ಬೀಗ ಹಾಕಿದ ಮನೆಯನ್ನು ನೋಡಿ ರಾತ್ರಿ **11** ಗಂಟೆ ಸುಮಾರಿಗೆ ಮನೆಗೆ ಹೋಗಿ ಒಂದು ಕಬ್ಬಿನ ರಾಡಿನಿಂದ ಬೀಗ ಮುರಿದ್ದು, ಒಳಗಡೆ ಹೋಗಿ ಬೇಡ್ ರೂಮ್ ನ ಅಲಮರದಲ್ಲಿ ಇದ್ದ **3** ತೊಲೆಯ ಬಂಗಾರದ ಆಭರಣಗಳು, ನಗದು ಹಣ **25** ಸಾವಿರ ರೂಪಾಯಿ ಮತ್ತು ಒಂದು ಸಾಮ್ ಸಾಂಗ್ ಟಚ್ ಸಿ್ರಕೀನ್ ಮೊಬೈಲ್ ಕಳ್ಳತನ ಮಾಡಿಕೊಂಡು ಹೋದ್ದೇವು ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ನಂತರ ಹೊಸಳ್ಳಿ ಕ್ರಾಸ್ ಗೆ ಹೋಗಿ ಒಂದು ಬಿಲ್ಡಿಂಗ್ ನಲ್ಲಿ ಬೀಗ ಹಾಕಿದ ಮನೆಯನ್ನು ನೋಡಿ ರಾಡ್ ನಿಂದ ಬೀಗ ಮುರಿದ್ದು ನೋಡಿದ್ದಾಗ ಅದು ಅಫೀಸ್ ಇತ್ತು ಅಲ್ಲಿ ಯಾವುದೇ ಹಣ ಮತ್ತು ಆಭರಣ ಇಲ್ಲದ ಕಾರಣ ಅಫೀಸ್ ಟೆಬಲ್ ಮೇಲೆ ಇದ್ದ ಮೂರು ಲ್ಯಾಪ್ ಟಾಪ್ ಗಳನ್ನು ಕಳ್ಳತನ ಮಾಡಿಕೊಂಡು ಊರಿಗೆ ಹೋದ್ದೇವು ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಕಳ್ಳತನ ಮಾಡಿದ **25** ಸಾವಿರ ರೂಪಾಯಿಗಳಲ್ಲಿ ನಾವು ತಲಾ **5** ಸಾವಿರ ರೂಪಾಯಿಗಳನ್ನು

ಹಂಚಿಕೊಂಡು ಇಲ್ಲಿಯ ವರೇಗೆ ತಿಂದು ಖರ್ಚು ಮಾಡಿ ಉಳಿದ ಹಣವನ್ನು ಪೊಲೀಸರಿಗೆ ಒಪ್ಪಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳನ್ನು ನಾವು ಠಾಣೆಯಲ್ಲಿ ನೋಡಿ ಗುರುತಿಸಿರುತ್ತೇವೆ ಎಂದರೆ ಸರಿಯಲ್ಲ. ಅವರನ್ನು ಗುರುತಿಸಿ ದಿನಾಂಕಃ **03.08.2021** ರಂದು ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ನಿರಾಕರಿಸಿದ ಹೇಳಿಕೆಯನ್ನು ನಿಪಿ **4** ಎಂದು ಗುರುತಿಸಲಾಯಿತು. ನಾನು ನಿಪಿ **4** ರಂತೆ ಪುರವಣಿ ಹೇಳಿಕೆಯನ್ನು ಹೇಳಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ನೀಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ.ಆರ್.ಕೆ ರವರಿಂದಃ

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.